Q : 1540

ಶ್ರೀ ಶಿವಶೇಖರಪ್ಪಗೌಡ ಶಿರವಾಳೆ (ಶಹಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗ ಜಿಲ್ಲೆಯ ಶಹಾಪುರದಲ್ಲಿ ಮುನ್ಸೀಫ್ ನ್ಯಾಯಾಲಯದ ಕಟ್ಟಡ ನಿರ್ಮಾಣಕ್ಕೆ ಜಮೀನನ್ನು ವಶಪಡಿಸಿಕೊಳ್ಳುವ ವಿಚಾರ ಬಹಳ ಕಾಲದಿಂದಲೂ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಎಷ್ಟು ಸಮಯದಿಂದ ಈ ವಿಚಾರದ ಬಗ್ಗೆ ಇನ್ನೂ ತೀರ್ಮಾನ ಕೈಗೊಂಡಿರುವುದಿಲ್ಲ.

ಇ) ಜಮೀನಿನ ಮಾಲೀಕರಿಗೆ ಪರಿಹಾರಧನ ನೀಡಲಾಗಿದೆಯೆ ;

ಈ) ಇಲ್ಲದಿದ್ದಲ್ಲಿ ಕಾರಣವೇನು?

ಉ) ನ್ಯಾಯಾಲಯದ ಕಟ್ಟಡವನ್ನು ಈ ವರ್ಷ ಪ್ರಾರಂಭ ಮಾಡಲಾಗುವುದೆ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) 1985ರಿಂದ

ಇ) ಇಲ್ಲ. ಕಾರಣ ಲೋಕೋಪಯೋಗಿ ಮತ್ತು ಕಂದಾಯ ಇಲಾಖೆಗಳಲ್ಲಿ ವಿಷಯ ಪರಿಶೀಲನೆಯಲ್ಲಿದೆ.

ಈ) ಜಮೀನನ್ನು ವಶಪಡಿಸಿಕೊಂಡಿಲ್ಲ. ಈಗಾಗಲೇ ಸ್ವಾಧೀನಪಡಿಸಿಕೊಳ್ಳಬೇಕೆಂದಿರುವ ಜಮೀನು ನ್ಯಾಯಾಲಯ ಕಟ್ಟಡಕ್ಕೆ ಸೂಕ್ತವಲ್ಲವೆಂದು ಸ್ಥಳೀಯ ವಕೀಲರ ಸಂಘದಿಂದ ಬಂದಿರುವ ಮನವಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉ) ಈ ವಿಷಯವನ್ನು ಆದ್ಯತೆಯ ಮೇಲೆ ಪರಿಶೀಲಿಸಲಾಗುವುದು.

ವಿಷಯ : ಸೇಡಂ ತಾಲ್ಲೂಕಿನ ತೊಲಮಾಮಿಡಿ ಸಮೀಪ ನೆರಟ್ಲಕೆರೆ ಮಂಜೂರಾತಿ.

Q : 1727

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತೊಲಮಾಮಿಡಿ ಸಮೀಪ ನೆರಟ್ಲವಾಡ ಕೆರೆಯನ್ನು 1992-93ನೇ ಸಾಲಿನಲ್ಲಿ ಮಂಜೂರು ಮಾಡಿ ಪ್ರಾರಂಭಮಾಡಲು ಆದೇಶ ನೀಡಿರುವುದು ನಿಜವಲ್ಲವೇ;

ಆ) ಇಲ್ಲಿಯವರೆಗೆ ಈ ಕೆರೆ ನಿರ್ಮಾಣಕ್ಕಾಗಿ ಆಗಿರುವ ಖರ್ಚು ಎಷ್ಟು; ಒಂದು ವೇಳೆ ಪ್ರಾರಂಭ ಮಾಡಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳು ಏನು;

ಇ) ಈಗಲಾದರೂ ಸಹ ಇದೇ 1992-93ನೇ ಸಾಲಿನಲ್ಲಿ ಈ ಕೆರೆಯನ್ನು ಪ್ರಾರಂಭ ಮಾಡಬಹುದೇ?

ಡಾ ॥ ಆರ್. ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ನಿಜವಲ್ಲ

ಅ) ಖರ್ಚಿನ ಪ್ರಶ್ನೆ ಉದ್ಭವಿಸುವುದಿಲ್ಲ, ಕಾಮಗಾರಿ ಇದುವರೆವಿಗೆ ಯಾವ ಅನುಮೋದಿತ ಕಾರ್ಯಗಳಲ್ಲೂ ಸೇರಿಲ್ಲ.

ಇ) ಇಲ್ಲ ; ಆದರೆ ಈ ಕಾಮಗಾರಿಯು 1993-94ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರುವುದರಿಂದ ಈ ಬಗ್ಗೆ ಪರಿಶೀಲಿಸಲಾಗುವುದು.

ವಿಷಯ : ಗುಬ್ಬಿ ನಗರದ ಮುನ್ಸೀಫ್ ಕೋರ್ಟ್ ಕಟ್ಟಡದ ಕಾಂಪೌಂಡು ಕಟ್ಟುವ ಬಗ್ಗೆ.

Q : 1633

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಬ್ಬಿ ನಗರದ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ಕಟ್ಟಡದ ಕಾಂಪೌಂಡು ಕಟ್ಟುವ ಕಾರ್ಯ ಪೂರ್ಣವಾಗಿದೆಯೆ ;

ಆ) ಕಾಂಪೌಂಡು ಇಲ್ಲದೆ ನ್ಯಾಯಾಲಯದ ಆವರಣದಲ್ಲಿ ಗಲೀಜು ಆಗುತ್ತಿರುವುದು ನಿಜವಲ್ಲವೆ ; ಹಾಗಾದರೆ ಕಾಂಪೌಂಡು ಯಾವಾಗ ಕಟ್ಟಿಸಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಹೌದು. ಆದಷ್ಟು ಬೇಗ ಕಾಂಪೌಂಡನ್ನು ಕಟ್ಟಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ : ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ಪವರ್‌ಲೂಮ್‌ಗಳಿಗೆ ವಿದ್ಯುತ್ ಸರಬರಾಜು.

Q : 1632

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಬ್ಬಿ ತಾಲ್ಲೂಕು ಕಸಬಾ ಹೋಬಳಿ ಕಲ್ಲೂರು ಗ್ರಾಮದಲ್ಲಿ ಕೆಹೆಚ್‌ಡಿಸಿ ನೆರವಿನಿಂದ ಪವರ್‌ಲೂಮ್‌ಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪವರ್‌ಲೂಮ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ವೇಳೆಯನ್ನು ನಿಗದಿ ಮಾಡಲಾಗಿದೆಯೆ? ಇದರಿಂದ ನೇಕಾರರಿಗೆ ತೊಂದರೆಯಾಗುವುದಿಲ್ಲವೇ?

ಇ) ಈ ಪ್ರದೇಶವನ್ನು ಕೈಗಾರಿಕಾ ನಗರವೆಂದು ತೀರ್ಮಾನಿಸಿ ಬೆಳಿಗ್ಗೆ 9 ರಿಂದ ರಾತ್ರಿ 8ರ ವರೆವಿಗೆ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಗೂ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಕಲ್ಲೂರು ಗ್ರಾಮಕ್ಕೆ ತುರುವೆಕೆರೆ ಸಬ್‌ಸ್ಟೇಷನ್‌ನ ತಾಳೆಕೆರೆ 11 ಕೆವಿ ಫೀಡರ್